# ಪದ್ಯ ಭಾಗ–೨ ಪಾರಿವಾಳಗಳು

**ಕವಿ – ಸು. ರಂ. ಎಕ್ಕುಂಡಿ (ಸುಬ್ಬಣ್ಣ ರಂಗಣ್ಣ ಎಕ್ಕುಂಡಿ)**

**ಅ) ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ**

**೧) ಪಾರಿವಾಳಗಳ ಆನಂದಕ್ಕೆ ಕಾರಣವೇನು?**

**ಉತ್ತರ:** ಪಾರಿವಾಳವು ಇಟ್ಟ ಮೊಟ್ಟೆ ಒಡೆದು ಮರಿಗಳು ಹೊರ ಬಂದಾಗ ಅವುಗಳ ಪ್ರೀತಿ ಹೆಚ್ಚಾಯಿತು. ಪ್ರತಿನಿತ್ಯ ಆ ಮರಿಗಳ ಮಧುರವಾದ ಚಿಲಿಪಿಲಿ ಸದ್ದು ಕೇಳುತ್ತಾ ಪಾರಿವಾಳಗಳಿಗೆ ಆನಂದವಾಯಿತು.

**೨) ಬೇಡ ಏನು ಮಾಡಿದನು?**

**ಉತ್ತರ:** ಹಸಿದಿದ್ದ ಬೇಡನೊಬ್ಬನು ಪಾರಿವಾಳಗಳು ವಾಸವಾಗಿದ್ದ ಮರದ ಬಳಿಬಂದು ಬಲೆಯನ್ನು ಹರಡಿದನು. ಆ ಬಲೆಗೆ ಬಿದ್ದ ಪಾರಿವಾಳಗಳ ಸಂಸಾರವನ್ನು ಹೊತ್ತುಕೊಂಡು ಹೋದನು.

**ಇ) ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧) ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

**ಉತ್ತರ:** ಜೋಡಿ ಪಾರಿವಾಳಗಳು ದುಡುಕಿನಿಂದ ತಮ್ಮ ಮರಿಗಳ ಮೇಲಿನ ವ್ಯಾಮೋಹದಿಂದ ತಾವೂ ಸಹ ಬೇಡನಿಗೆ ಆಹಾರವಾದದ್ದು ಸರಿಯಲ್ಲ. ತಮ್ಮ ಮರಿಗಳು ಬಲೆಗೆ ಸಿಕ್ಕಿಕೊಂಡದನ್ನು ನೋಡಿದ ಹೆಣ್ಣು ಪಾರಿವಾಳ ವಿವೇಚನೆಯಿಲ್ಲದೆ ಮರಿಗಳ ಮೇಲಿನ ಅತಿಯಾದ ವಾತ್ಸಲ್ಯದಿಂದ ತಾನೂ ಬಲೆಗೆ ಸಿಕ್ಕಿಕೊಂಡಿತು. ಹೆಣ್ಣು ಪಾರಿವಾಳವನ್ನು ಬಿಟ್ಟಿರದಷ್ಟು ಹಚ್ಚಿಕೊಂಡಿದ್ದ ಗಂಡು ಪಾರಿವಾಳವು ತಾನೂ ಕೂಡ ಬಲೆಗೆ ಸಿಕ್ಕಿಕೊಂಡಿತು. ಹೀಗೆ ಜೋಡಿ ಪಾರಿವಾಳಗಳು ಅತಿಯಾದ ವ್ಯಾಮೋಹದಿಂದ ಪ್ರಾಣ ಕಳೆದುಕೊಂಡವು. ಸಾಧ್ಯವಾದರೆ ತಮ್ಮನ್ನೂ ರಕ್ಷಿಸಿಕೊಂಡು ಮರಿಗಳನ್ನು ಕಾಪಾಡಲು ಯೋಚಿಸಬಹುದಿತ್ತು. ಸಾಧ್ಯವಾಗದಿದ್ದರೆ ತಾವಾದರೂ ಬದುಕಬಹುದಿತ್ತು. ಆದ್ದರಿಂದ ವ್ಯಾಮೋಹ ಒಳ್ಳೆಯದಲ್ಲ ಎಂದು ಹೇಳಬಹುದು.

**೨) 'ಪಾರಿವಾಳ' ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ದಟ್ಟವಾದ ಕಾಡಿನ ಹೆಮ್ಮರದ ಪೊಟರೆಯಲ್ಲಿ ಪಾರಿವಾಳಗಳ ಜೋಡಿ ವಾಸವಾಗಿದ್ದವು. ಅವು ಪರಸ್ಪರ ಒಂದನ್ನೊಂದು ಬಿಟ್ಟಿರದಷ್ಟು ಪ್ರೀತಿ ಹೊಂದಿದ್ದವು. ಒಮ್ಮೆ ಹೆಣ್ಣು ಪಾರಿವಾಳವು ಮೊಟ್ಟೆಗಳನ್ನು ಇಟ್ಟಿತು. ಆ ಮೊಟ್ಟೆಗಳು ಒಡೆದು ಹೊರಬಂದು ಚಿಲಿಪಿಲಿ ಸದ್ದುಮಾಡುವುದನ್ನು ಕೇಳುತ್ತಾ ಪಾರಿವಾಳಗಳು ಆನಂದದಿಂದ ಬಾಳುತ್ತಿದ್ದವು. ಹೀಗಿರುವಾಗ ಒಂದು ದಿನ ಒಬ್ಬ ಬೇಡನು ಬಲೆ ಹಾಕಿದನು. ಆಟವಾಡುತ್ತಿದ್ದ ಪುಟ್ಟಮರಿಗಳು ಬೇಡನು ಹಾಕಿದ್ದ ಬಲೆಗೆ ಸಿಕ್ಕಿಬಿದ್ದವು. ಬಿಡಿಸಿಕೊಳ್ಳಲು ಕಿರುಚಾಡತೊಡಗಿದವು. ಬಲೆಗೆ ಸಿಲುಕಿದ ಪುಟ್ಟ ಮರಿಗಳನ್ನು ಕಂಡ ತಾಯಿ ಪಾರಿವಾಳ ತಾನೂ ಬಲೆಗೆ ದುಮುಕಿತು. ಹೆಣ್ಣು ಪಾರಿವಾಳವನ್ನು ಬಿಟ್ಟಿರಲಾರದ ಗಂಡುಪಾರಿವಾಳವು ಕಣ್ಣೀರಿಡುತ್ತಾ ತಾನೂ ಬಲೆಯ ಒಳಗೆ ಹೋಯಿತು. ಹೀಗೆ ಜೋಡಿ ಪಾರಿವಾಳಗಳು ಕುರುಡು ವಾತ್ಸಲ್ಯದ ಅವಿವೇಕದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು. 'ಮೋಹ' ಎಂಬುದು ಸರ್ವನಾಶಕ್ಕೆ ಕಾರಣ. ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು ಎಂಬುದೇ ಈ ಕಥನ ಕವನದ ಆಶಯವಾಗಿದೆ.

**ಈ) ಸಂದರ್ಭ ಸಹಿತ ವಿವರಿಸಿ**

**೧) "ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ"**

**ಉತ್ತರ:– ಆಯ್ಕೆ:** ಈ ವಾಕ್ಯವನ್ನು ಸು.ರಂ.ಎಕ್ಕುಂಡಿ ಅವರ **'ಸಮಗ್ರ ಕಥನ ಕವನಗಳು'** ಎಂಬ ಕೃತಿಯಿಂದ ತೆಗೆದುಕೊಳ್ಳಲಾಗಿರುವ **'ಪಾರಿವಾಳ'** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಪಾರಿವಾಳಗಳ ಪುಟ್ಟಮರಿಗಳು ಬೇಡನ ಬಲೆಗೆ ಸಿಕ್ಕಿಬಿದ್ದವು. ಬಿಡಿಸಿಕೊಳ್ಳಲು ಕಿರುಚಾಡತೊಡಗಿದವು. ಬಲೆಗೆ ಸಿಲುಕಿದ ಪುಟ್ಟ ಮರಿಗಳನ್ನು ಕಂಡ ತಾಯಿ ಪಾರಿವಾಳ ತಾನೂ ಬಲೆಗೆ ದುಮುಕಿತು. ಹೆಣ್ಣು ಪಾರಿವಾಳವನ್ನು ಬಿಟ್ಟಿರಲಾರದ ಗಂಡುಪಾರಿವಾಳವು ಕಣ್ಣೀರಿಡುತ್ತಾ ತಾನೂ ಬಲೆಯ ಒಳಗೆ ಹೋಯಿತು. ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ:** ಜೋಡಿ ಪಾರಿವಾಳಗಳ ಕುರುಡು ವಾತ್ಸಲ್ಯವು ಇಲ್ಲಿ ಸ್ವಾರಸ್ಯವಾಗಿ ಮೂಡಿಬಂದಿದೆ.

**೨) "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"**

**ಉತ್ತರ:– ಆಯ್ಕೆ:** ಈ ವಾಕ್ಯವನ್ನು ಸು.ರಂ.ಎಕ್ಕುಂಡಿ ಅವರ **'ಸಮಗ್ರ ಕಥನ ಕವನಗಳು'** ಎಂಬ ಕೃತಿಯಿಂದ ತೆಗೆದುಕೊಳ್ಳಲಾಗಿರುವ **'ಪಾರಿವಾಳ'** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಜೋಡಿ ಪಾರಿವಾಳಗಳು ಮರಿಗಳ ಮೇಲಿನ ಕುರುಡು ವಾತ್ಸಲ್ಯದ ಅವಿವೇಕದಿಂದ ತಾವೂ ಬಲೆಗೆ ಸಿಲುಕಿ ಬೇಡನ ಪಾಲಾದವು. 'ಮೋಹ' ಎಂಬುದು ಸರ್ವನಾಶಕ್ಕೆ ಕಾರಣ. ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ:** ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯಸಾಧನೆ ಮಾಡಬೇಕು. ಅತಿಯಾದ ವ್ಯಾಮೋಹ ಒಳ್ಳೆಯದಲ್ಲ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.